

# ಗೌಸ್ ಮೇಷ್ಟ್ರಿಗೆ ಕನ್ನಡವೇ ಕಲ್ಪವೃಕ್ಷ

**ಮಕ್ಕಳಿಗಷ್ಟೇ ಅಲ್ಲ, ಕನ್ನಡ ಭಾಷೆ ಕಲಿಯಬಯಸುವ ದೊಡ್ಡವರಿಗೂ ಸೈಯದ್ ಗೌಸ್ ಮೊಹಿಯುದ್ದೀನ್ ಪೀರಜಾದೆ ಕೈ ಹಿಡಿದು ನಡೆಸುವ ಮೇಷ್ಟ್ರು. ಕನ್ನಡದ ಕಂಪು ಹರಡಲಿಕ್ಕೆ ಈ ಮೇಷ್ಟ್ರ ಜೀವನವೇ ಮುಡಿಪಾಗಿರುವಂತಿದೆ.**

**■ ಈರಣ್ಣ ಬೆಂಗಾಲಿ**

ಸೈಯದ್ ಗೌಸ್ ಮೊಹಿಯುದ್ದೀನ್ ಪೀರಜಾದೆ ಅವರು ಕನ್ನಡ ಶಿಕ್ಷಕರಾಗಿ ರಾಯಚೂರಿನ ಉರ್ದು ಶಾಲೆ ಸೇರಿದಾಗ, ಶಾಲೆಯಲ್ಲಿ ಕನ್ನಡ ಭಾಷೆಯ ಅವಸ್ಥೆ ಅಷ್ಟೇನೂ ಚೆನ್ನಾಗಿರಲಿಲ್ಲ. ವಿದ್ಯಾರ್ಥಿಗಳಿಗೆ ಕನ್ನಡ ಭಾಷೆ ಕಬ್ಬಿಣದ ಕಡಲೆಯಾಗಿರುವುದನ್ನು ಕಂಡ ಸೈಯದ್ ಅವರನ್ನು ದಿನನಿತ್ಯ ಕಾಡುತ್ತಿದ್ದ ಆಲೋಚನೆ ಒಂದೇ – ಈ ಮಕ್ಕಳಿಗೆ ಕನ್ನಡ ಕಲಿಸುವುದು ಹೇಗೆ?

ಕನ್ನಡ ಭಾಷೆಯನ್ನು ಮಕ್ಕಳಿಗೆ ಇಷ್ಟವಾಗುವಂತೆ ಕಲಿಸುವುದು ಹೇಗೆಂದು ಮತ್ತೆ ಮತ್ತೆ ಅವಲೋಕನ ಮಾಡಿಕೊಳ್ಳುತ್ತಿದ್ದ ಸೈಯದ್, ಹೇಗಾದರೂ ಈ ಮಕ್ಕಳ ನಾಲಿಗೆ ಮೇಲೆ ಕನ್ನಡ ನಲಿದಾಡುವಂತೆ ಮಾಡಲೇಬೇಕೆಂದು ಪಣತೊಟ್ಟರು.

ಕನ್ನಡ ಭಾಷೆಯೆಂದರೆ ಸೈಯದ್ ಅವರಿಗೆ ಅಪಾರ ಪ್ರೀತಿ. ತಮ್ಮೊಲವಿನ ಭಾಷೆಯನ್ನು ಎಷ್ಟು ಸಾಧ್ಯವೋ ಅಷ್ಟು ಜನರಿಗೆ ಕಲಿಸಬೇಕೆನ್ನುವ ಆಸೆ. ಆದರೆ ಶಾಲೆಯ ಮಕ್ಕಳಿಗೆ ಕನ್ನಡ ಕಲಿಸುವುದು ಸುಲಭವಿರಲಿಲ್ಲ. ಕನ್ನಡ ತಡವರಿಸುತ್ತಿದ್ದ ಮಕ್ಕಳಿಗೆ ಕಲಿಕಾ ಪ್ರಕ್ರಿಯೆಯನ್ನೂ ಅತಿ ಸರಳಗೊಳಿಸುವುದೊಂದೇ ಮಾರ್ಗವಾಗಿತ್ತು. ಹೀಗಾಗಿ ಪಠ್ಯಕ್ರಮದ ಹೊರತಾಗಿ, ಕನ್ನಡ ಕಲಿಸಲು ತಮ್ಮದೇ ಆದ ಉಪಾಯ ಕಂಡುಕೊಂಡರು.

ಕನ್ನಡ ಭಾಷೆಯ ಪರಿಣಾಮಕಾರಿ ಬೋಧನೆಗೆ ಕನ್ನಡ ಪದಗಳು, ಅಕ್ಷರಗಳನ್ನು ಜೋಡಿಸಿ ಕಟ್ಟಿಗೆಯ ಹಲಗೆಯಲ್ಲಿ ಪಾಠೋಪಕರಣಗಳನ್ನು ತಾವೇ ಸಿದ್ಧಪಡಿಸಿದರು. ಏಳನೇ ತರಗತಿ ಬಳಿಕ ಎರಡು ವರ್ಷದ ಕಾರ್ಪೆಂಟಿಂಗ್/ಬಡಿಗೆತನ ಕೋರ್ಸ್ ಮಾಡಿದ್ದ ಸೈಯದ್, ಆ ಕಾರ್ಪೆಂಟಿಂಗ್ ವಿದ್ಯೆಯನ್ನು ಪಾಠೋಪಕರಣಗಳ ರಚನೆಗೆ ಬಳಸಿಕೊಂಡರು. ಒಂದನೇ ತರಗತಿ ಮಕ್ಕಳಿಗೆ



ಅಪರೂಪದ ಕನ್ನಡ ಮೇಷ್ಟ್ರು ಸೈಯದ್ ಗೌಸ್ ಮೊಹಿಯುದ್ದೀನ್ ಪೀರಜಾದೆ

ಅಥವಾ ಕನ್ನಡ ಗೊತ್ತಿರದವರ ಕಲಿಕೆಗೆ ಅವಶ್ಯಕ ಮೂಲಾಕ್ಷರ, ಕಾಗುಣಿತಾಕ್ಷರ, ಸಂಖ್ಯೆಗಳನ್ನು ಒಳಗೊಂಡ, ಶಬ್ದಗಳಿಂದ ಆಟವಾಡುವ, ಪದಗಳ ರಚನೆ ಮಾಡುವ ಕನ್ನಡ ಬೋರ್ಡ್ ಸಿದ್ಧಗೊಳಿಸಿದರು. ಇವುಗಳೊಂದಿಗೆ, ಕನ್ನಡ ಪದಗಳ ಫ್ಲಾಶ್ ಕಾರ್ಡ್‌ಗಳನ್ನು ವಿನ್ಯಾಸ ಮಾಡಿದ್ದು, ಕಲಿಕೆಯನ್ನು ಸಲೀಸು ಮಾಡಿತು.

ವಿದ್ಯಾರ್ಥಿಯ ಕಲಿಕಾ ಮಟ್ಟ, ಸಾಮರ್ಥ್ಯವನ್ನು ಗಮನದಲ್ಲಿರಿಸಿಕೊಂಡು ಬೋಧನಾ ವಿಧಾನ ಅನುಸರಿಸುತ್ತಾರೆ. ಕಲಿಕೆಯನ್ನು ಸುಲಭವಾಗಿಸಲು ಮೂರು ಹಂತಗಳನ್ನು ರೂಪಿಸಿದರು. ಮೊದಲನೇ ಹಂತದಲ್ಲಿ ಮೂಲಾಕ್ಷರಗಳನ್ನು, ಎರಡನೆಯದಾಗಿ ಬಳ್ಳಿಗಳನ್ನು, ಅದರ ಪದಗಳನ್ನು ಮತ್ತು ಮೂರನೇ ಹಂತದಲ್ಲಿ ಸಜಾತಿ ಮತ್ತು ವಿಜಾತಿ ಒತ್ತಕ್ಷರಗಳ ಪದಗಳನ್ನು ಕಲಿಸುತ್ತಾರೆ. ಸನ್ನೆ ಮೂಲಕ ಕನ್ನಡ ಕಲಿಕೆ ಸೈಯದ್ ಅವರ ಬೋಧನೆಯ ಮತ್ತೊಂದು ವಿಶೇಷ. ಯಾವುದೇ ಒಂದು ಕನ್ನಡ ಪದವನ್ನು ನಡಿಗೆ ಮೂಲಕ ತೋರಬಲ್ಲರು. ವಿದ್ಯಾರ್ಥಿಗಳು ಅವರ ಹೆಜ್ಜೆ ಮೂಲಕ ಅಕ್ಷರ, ಪದಗಳನ್ನು ನಿಖರವಾಗಿ ಗುರುತಿಸಬಲ್ಲರು.

## ಸರಳತೆಯಿಂದ ಕಠಿಣತೆ ಕಡೆಗೆ

ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಲು 'ಸರಳತೆಯಿಂದ ಕಠಿಣತೆ ಕಡೆಗೆ...' ಬೋಧನಾ ಕ್ರಮ ಅನುಸರಿಸುವ ಸೈಯದ್, ತಾವು ಶಿಕ್ಷಕರಾಗಿದ್ದಾಗ, ಕನ್ನಡ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ವಿಶೇಷ ತರಗತಿ ತೆಗೆದುಕೊಳ್ಳುತ್ತಿದ್ದರು.

ಕನ್ನಡ ಕಲಿಕೆಯಷ್ಟೇ ಅಲ್ಲ, ಒಂದಿಲ್ಲೊಂದು ಚಟುವಟಿಕೆಯಲ್ಲಿ ಸದಾ ಸಕ್ರಿಯರಾಗಿರುವ ಸೈಯದ್ ಗೌಸ್, ನಿವೃತ್ತರಾದ ನಂತರವೂ ಕನ್ನಡ ಕಲಿಯಬಯಸುವ ವಿದ್ಯಾರ್ಥಿಗಳಿಗೆ, ಯುವಜನತೆಗೆ, ಅದೆಷ್ಟೋ ಹಿರಿಯರಿಗೆ ಕನ್ನಡವನ್ನು ಇಂದಿಗೂ ಕಲಿಸುತ್ತಿದ್ದಾರೆ. ಕನ್ನಡ ಸೇವೆಯನ್ನು ಯಾವುದೇ ಫಲಾಪೇಕ್ಷೆಯಿಲ್ಲದೆ ನಿರಂತರವಾಗಿ ಮುಂದುವರೆಸಿದ್ದಾರೆ. ಇವರ ವಿಭಿನ್ನ ಕನ್ನಡ ಬೋಧನೆ ಕುರಿತಾಗಿ 'ಅಪರೂಪದ ಕನ್ನಡ ಮೇಷ್ಟ್ರು' ಎಂಬ ಪುಸ್ತಕ ಪ್ರಕಟವಾಗಿದೆ. ಪೀರಜಾದೆ ಅವರೇ 'ಕಲಿ ಕನ್ನಡ' ಎಂಬ ಹೊಸ ಮಾದರಿಯ ಅಂಕಲಿಪಿಯನ್ನು ಬರೆದಿದ್ದಾರೆ.

ತಮ್ಮ ವಿದ್ಯಾರ್ಥಿಗಳ ಕುರಿತು ಹೆಮ್ಮೆಯಿಂದ ಹೇಳಿಕೊಳ್ಳುವ ಸೈಯದ್, 'ನನ್ನ ವಿದ್ಯಾರ್ಥಿಗಳು ಕನ್ನಡ ಕಲಿತು ಅದರಲ್ಲಿ ಭವಿಷ್ಯ ರೂಪಿಸಿಕೊಂಡಿರುವುದನ್ನು ನೋಡಿದರೆ ಮನಸ್ಸು ತುಂಬಿಬರುತ್ತದೆ. ಒಬ್ಬ ಗುರುವಿಗೆ ಇದಕ್ಕಿಂತ ಮತ್ತೊಂದು ಸಂತೋಷ ಬೇಕೆ?' ಎಂದು ಭಾವುಕರಾಗಿ ನಗುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in